ಸಿರಿಗನ್ನಡಂ ಗೆಲ್ಗೆ

ಪ್ರಥಮ ಯುವ ಕನ್ನಡ ಸಾಹಿತ್ಯ ಸಮ್ಮೇಳನ

ಬೀದರ

ದಿನಾಂಕ: ೦೯ ನವ್ಹೆಂಬರ ೨೦೧೧

ಸಮ್ಮೇಳನಾಧ್ಯಕ್ಷರ ನುಡಿ



ಡಾ. ಬಸವರಾಜ ಬಲ್ಲೂರ

ಸ್ವಾಗತ ಸಮಿತಿ

ಹಾಗೂ

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಬೀದರ.

ಓಂ ಶ್ರೀ ಗುರುಬಸವಲಿಂಗಾಯ ನಮಃ

ಹೆಸರಾಯಿತು ಕರ್ನಾಟಕ – ಉಸಿರಾಗಲಿ ಕನ್ನಡ

ತಾಳ ಮಾನ ಸರಿಸವನರಿಯೆ,
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲ ಸಂಗಮದೇವಾ ನಿನಗೆ ಕೆಡಿಲ್ಲವಾಗಿ
ಆನು ಒಲಿದಂತೆ ಹಾಡುವೆ.
– ಬಸವಣ್ಣ

ಈ ಪವಿತ್ರ ವೇದಿಕೆಗೆ ಭಕ್ತಿಯ ನಮನಗಳು. ತಮ್ಮೆಲರಿಗೂ ರಾಜ್ಯೋತ್ಸವದ ಶುಭ ಹಾರೈಕೆಗಳು, ಶ್ರೀಕಾಂತ ಪಾಟೀಲ ವೇದಿಕೆ ಹಾಗೂ ಮ.ಮಾ.ಬೋರಾಳಕರ್ ಮಂಟಪದಲ್ಲಿ ನೆರೆದಿರುವ ಪರಮಪೂಜ್ಯರೆ, ಗೌರವಾನ್ವಿತ ಅತಿಥಿಗಳೆ, ಗಣ್ಯರೆ, ಅಧ್ಯಕ್ಷರೆ, ಸ್ವಾಗತ ಸಮಿತಿಯ ಅಧ್ಯಕ್ಷರೆ, ಪದಾಧಿಕಾರಿಗಳೆ, ಸೇರಿರುವ ಎಲ್ಲ ಆತ್ಮೀಯರೆ, ಮಾಧ್ಯಮದವರೆ, ಹಿರಿಯ ಸ್ನೇಹಿತರೆ, ಕನ್ನಡತ್ವವನ್ನು ಉಸಿರಾಗಿಸಿಕೊಂಡು ಬದುಕಿರುವ ಮತ್ತು ಬದುಕುತ್ತಿರುವ ಎಲ್ಲಾ ಚೇತನಗಳಿಗೂ ಅನಂತ ಶರಣು ಶರಣಾರ್ಥಿಗಳು.

ಸನ್ಮಾನ್ಯರೆ, ಹಿರಿಯರೇ,

ಇಂದು ಬೀದರಿನಲ್ಲಿ ಮೊದಲ ಯುವ ಕನ್ನಡ ಸಾಹಿತ್ಯ ಸಮ್ಮೇಳನ ಜರುಗುತ್ತಿರುವುದು ಅನೇಕ ಕಾರಣಗಳಿಂದ ಚಾರಿತ್ರಿಕ ಮಹತ್ವದ್ದಾಗಿದೆ. ಇದೊಂದು ಪವಿತ್ರವಾದ ವೇದಿಕೆ, ಇಂಥ ಸಮ್ಮೇಳನಕ್ಕೆ ಅರಿವು ಮತ್ತು ಇರವುಗಳಲ್ಲಿ ಅತ್ಯಂತ ಸಣ್ಣವನಾದ ನನಗೆ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿರುವಿರಿ. ಇದು ನನಗೆ ಸಂತೋಷದೊಂದಿಗೆ, ಜವಾಬ್ದಾರಿಯು ಹೆಚ್ಚಿಸಿದ ಅರಿವು ನನ್ನಲಿದೆ. ನಿಜವಾಗಿ ನಾನು ಈ ಸಮ್ಮೇಳನದ ಅಧ್ಯಕ್ಷತೆಗೆ ಅರ್ಹನಲ್ಲ. ಆದರೆ ಸ್ನೇಹಿತರ ಒತ್ತಾಯ, ಹಿರಿಯರ ಆಗ್ರಹಪೂರಕ ಪ್ರೀತಿಯನ್ನು ಮೀರುವಷ್ಟು ಶಕ್ತಿ ನನಗಿಲ್ಲ. ಜೊತೆಗೆ ಕನ್ನಡತ್ವದ ಏಳಿಗೆಗಾಗಿ ಎಲೆಮರೆಯ ಕಾಯಿಯಂತೆ, ದುಡಿಯುತ್ತ ಗಂಧದ ಕೊರಡಂತೆ ತೇದುಕೊಳ್ಳುತ್ತಿರುವ

ಎಲ್ಲ ಸೃಜನಶೀಲ ಬರಹಗಾರರಿಗೆ, ಕ್ರೀಯಾಶೀಲ ಲೇಖಕರಿಗೆ, ನಿಷ್ಪೃಹರಾಗಿ ದುಡಿಯುವವರಿಗೆ ಈ ಗೌರವ ಸಲ್ಲುತ್ತದೆ. ಅವರೆಲ್ಲರ ಪ್ರಾತಿನಿಧಿಕವಾಗಿ ಮಾತ್ರ ನಾನು ಇಲ್ಲಿದ್ದೇನೆ. ಹಾಗಾಗಿ ತಾವೆಲ್ಲ ತೋರಿದ ಅಭಿಮಾನ ವಿಶ್ವಾಸ, ಗೌರವಕ್ಕೆ ಧಕ್ಕೆ ತರದೆ ಬಸವಣ್ಣನವರ ಮೇಲಿನ ವಚನದಂತೆ ಆನು ಒಲಿದಂತೆ ಹಾಡುವೆ ನಿಮಗೆ ಕೇಡಿಲ್ಲವಾಗಿ.

ಗಡಿಭಾಗವಾದ ಬೀದರಿನಲ್ಲಿ ಏನಾದರೂ ಹೊಸದನ್ನ ಯೋಚಿಸುತ್ತಲೇ ಅದನ್ನು ಕಾರ್ಯರೂಪಕ್ಕೆ ತರುವ ಮೂಲಕ 'ಕನಸಿಗೆ ಆಕೃತಿ' ನೀಡುವ ಕ್ರಿಯಾಶೀಲ, ಸಂಘಟಕ ಸ್ನೇಹಿತ ಸುರೇಶ ಚನ್ನಶೆಟ್ಟಿ ಅವರಿಗೆ ಮತ್ತು ಅವರ ಎಲ್ಲ ಸಂಗಾತಿಗಳಿಗೆ ಬರಹಗಾರರ ಪರವಾಗಿ ವಯಕ್ತಿಕವಾಗಿ ತುಂಬುಹೃದಯದ ಕೃತಜ್ಞತೆ ಸಲ್ಲಿಸುತ್ತೇನೆ. ಜಿಲ್ಲೆಯ ಕೇಂದ್ರಸ್ಥಳದಲ್ಲಿ ತಾಲೂಕು ಪರಿಷತ್ತು ಕೂಡ ಹೇಗೆ ಕ್ರೀಯಾಶೀಲವಾಗಿರಬೇಕು, ಎಂಬುದಕ್ಕೆ ರಾಜ್ಯದಲ್ಲಿ ಮಾದರಿಯೆಂಬುದು ಅವರು ಆಯೋಜಿಸಿರುವ ಸಮ್ಮೇಳನ, ಸಮಾವೇಶಗಳೇ ಸಾಕ್ಷಿ. ಅವರೊಂದಿಗೆ ಇರುವ ಎಲ್ಲಾ ಯುವಪಡೆಗೂ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೂ ಕೃತಜ್ಞತೆ ಸಲ್ಲುತ್ತವೆ.

ಬದುಕಿನ ನಡೆನುಡಿ ಸಿದ್ಧಾಂತಕ್ಕೆ ಭಾಷ್ಯ ಬರೆಯಲು ಪಂಡಿತ ಭಾಷೆಯ ಪ್ರಾಬಲ್ಯತನ ಮುರಿದು, 'ಕನ್ನಡ'ಕ್ಕೆ ಜನ ಭಾಷೆಯ ದೀಕ್ಷೆ ನೀಡಿ ಬದುಕಿನ ಭಾಷೆಯಾಗಿಸಿದ ಬಸವಾದಿ ಶರಣರನ್ನು ನೆನೆಯುತ್ತ, ಈ ಭಾಗದಲ್ಲಿ ಪರಭಾಷೆ ಪ್ರಾಬಲ್ಯದಲ್ಲಿಯೂ ಕನ್ನಡವನ್ನು ಉಳಿಸಿಕೊಟ್ಟ ಕನ್ನಡದ ಪಟ್ಟದ್ದೇವರೆಂದೇ ಕರೆಸಿಕೊಂಡ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದ್ದೇವರನ್ನು, ಕರ್ನಾಟಕ ಏಕೀಕರಣಕ್ಕೆ ದುಡಿದ ಧೀರ ಮಹಿಳೆ ಡಾ. ಜಯದೇವಿ ತಾಯಿ ಲಿಗಾಡೆ, ಪ್ರಭುರಾವ ಕಂಬಳಿವಾಲೆ, ಆರ್.ವಿ.ಬಿಡಪ್ಪ ಅವರನ್ನು ಲೋಕನಾಯಕ ಭೀಮಣ್ಣ ಖಂಡ್ರೆಯವರನ್ನು ತುಂಬು ಹೃದಯದಿಂದ ಸ್ಮರಿಸುತ್ತೇನೆ.

ಬೀದರ:

ಜಗತ್ಪ್ರಸಿದ್ಧ ಬಿದ್ರಿ (ಬಿದರಿ) ಕಲೆಯ ಹೆಸರಿನೊಂದಿಗೆ ಗುರುತಿಸಲ್ಪಡುವ ಬೀದರ ವಿದುರನಾಡೆಂದು, ಅಟ್ಟಳೆನಾಡೆಂದು ಖ್ಯಾತಿವೆತ್ತ ಈ ನೆಲ ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಸರಾದದ್ದು. ಚಾರಿತ್ರಿಕವಾಗಿ ಕ್ರಿಪೂ ೩ನೇ ಶತಮಾನದ ಮೌರ್ಯರ ಆಳ್ವಿಕೆಗೆ ಒಳಗಾಗಿದ್ದ ಬೀದರ ಶಾತವಾಹನರು,

ಕದಂಬರು, ರಾಷ್ಟ್ರಕೂಟರು, ಕಾಕತೀಯರು, ಬಿಜ್ಜಳ, ಮೊಘಲರು ಈ ಪ್ರಾಂತವನ್ನು ಆಳಿದ್ದಾರೆ. ರಂಜೇರಿನ ಸಿಂಧರು, ಕಲ್ಯಾಣದ ಚಾಳುಕ್ಯರು, ಕಳಚೂರಿಗಳು ಹಾಗೂ ಬಹಮನಿ ಅರಸರು ಹೀಗೆ ಕರ್ನಾಟಕದಲ್ಲಿಯೇ ಅತಿ ಹೆಚ್ಚು ರಾಜ ಮನೆತನಗಳಿಗೆ ರಾಜಧಾನಿಯಾದ ಅಗ್ಗಳಿಕೆ ಈ ನೆಲಕ್ಕಿದೆ.

ಧಾರ್ಮಿಕವಾಗಿ, ಜೈನ, ಬೌದ್ಧ, ಶೈವ, ವೈದಿಕ, ವೀರಶೈವ/ಲಿಂಗಾಯತ, ಇಸ್ಲಾಂ, ಕ್ರೈಸ್ತ, ಸಿಖ್, ಮೊದಲಾದ ಧರ್ಮದ ಅನುಯಾಯಿಗಳು ಬೀದರದಲ್ಲಿ ಧಾರ್ಮಿಕ ಸೌಹಾರ್ದತೆಯಿಂದ ಬಾಳುತ್ತಿದ್ದು ಮತೀಯ ಸಹಿಷ್ಣುತೆ, ಸಾಮಾಜಿಕವಾಗಿ ಸಾಮರಸ್ಯ ಈ ಮಣ್ಣಿನ ಗುಣವಾಗಿದೆ.

ಭಾಷಿಕವಾಗಿ ಆಂಧ್ರ ಮತ್ತು ಮಹಾರಾಷ್ಟ್ರಗಳ ಗಡಿಗೆ ಹೊಂದಿರುವ ಬೀದರ ಇಲ್ಲಿಯ ಮಾತೃಭಾಷೆ ಕನ್ನಡ, ಮರಾಠಿ ಪ್ರಭಾವಿತ ಊರುಗಳಲ್ಲಿ ಮರಾಠಿ ಬಳಕೆಯಲ್ಲಿದೆ. ನೈಜಾಮರ ಆಳ್ವಿಕೆಯ ಪ್ರಭಾವದಿಂದಾಗಿ ಇಲ್ಲಿ ಉರ್ದುಮಿಶ್ರಿತ ಹಿಂದಿ ದಿನನಿತ್ಯದ ವ್ಯವಹಾರದಲ್ಲಿ ಆಂಶಿಕವಾಗಿ ಬಳಕೆಯಾಗುತ್ತಿದೆ. ಹಲವಾರು ಭಾಷೆಯ ಜನರಿದ್ದರೂ ಭಾಷಿಕ ಸಾಮರಸ್ಯ ಇಲ್ಲಿದೆ.

ಸಾಂಸ್ಕೃತಿಕವಾಗಿ ಸಮೃದ್ಧಿ ಪಡೆದ ಈ ನೆಲದಲ್ಲಿ ಜನಪದ ಢಾಳವಾಗಿ ಜನತೆಯ ಮೇಲೆ ಪ್ರಭಾವ ಬೀರಿದೆ. ಹಲವಾರು ಕರಕುಶಲ ಕಲೆಗಳು ಇಲ್ಲಿವೆ. ಸೀಗಿಹುಣ್ಣಿಮೆ, ಗೌರಿಹುಣ್ಣಿಮೆ, ಬುಲಾಯಿ ಇಲ್ಲಿನ ವಿಶಿಷ್ಟ ಆಚರಣೆಗಳಾಗಿವೆ. ರಾಜ್ಯದ ಬೇರೆ ಭಾಗಗಳ ಹಬ್ಬಗಳಿಗಿಂತ ಭಿನ್ನ ರೀತಿಯ ಆಚರಣೆ ಸಂಪ್ರದಾಯ ಇಲ್ಲಿರುವುದು ಪ್ರಾದೇಶಿಕ ಮಹತ್ವವನ್ನು ಸಾರುತ್ತದೆ.

ಸಾಹಿತ್ಯ ಸಂಪತ್ತು:

ಸುಮಾರು ಎರಡು ಸಾವಿರ ವರ್ಷಕ್ಕೂ ಮೇಲ್ಪಟ್ಟ ಕನ್ನಡ ಸಾಹಿತ್ಯ, ಭಾರತದಲ್ಲಿ ಸಂಸ್ಕೃತ ತಮಿಳನ್ನು ಬಿಟ್ಟರೆ ಅತೀ ಪ್ರಾಚೀನತೆ ಹೊಂದಿದೆ. ಜಾಗತಿಕ ಸಾಹಿತ್ಯದ ಸಾಲಿನಲ್ಲಿ ಗುರುತಿಸಿಕೊಳ್ಳುವ ಸತ್ವ ಇದು ಹೊಂದಿದೆ. ವಿಭಿನ್ನವಾದ ಧರ್ಮ, ಸಾಮಾಜಿಕ ಸ್ತರವಿನ್ಯಾಸಗಳ ಮಧ್ಯ ಇಲ್ಲಿನ ಸಾಹಿತ್ಯ ಅನೇಕ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡು ಬೆಳೆದಿದೆ. ಹಾಗೆ ನೋಡಿದರೆ ಇಡೀ ಕನ್ನಡ ಸಾಹಿತ್ಯದಲ್ಲಿ ಬೀದರ ಪಾಲುಗಾರಿಕೆ ಹಿರಿದಾದದ್ದು.

ಕನ್ನಡದ ಮೊದಲ ಉಪಲಬ್ಧ ಗದ್ಯಕೃತಿ "ವಡ್ಡಾರಾಧನೆ"ಯು ಬೀದರ ಜಿಲ್ಲೆಯ ಹಳ್ಳಿಖೇಡ

ಗ್ರಾಮದಲ್ಲಿ ಸೃಷ್ಟಿಯಾಗಿದೆ. ರನ್ನ ಮೂಲತಃ ಮುದುವಳಲಿನವನಾಗಿದ್ದು ಶ್ರವಣಬೆಳಗೋಳದಲ್ಲಿ ಅಧ್ಯಯನ ಮಾಡಿದರೂ, ಅವನು ಆಶ್ರಯ ಪಡೆದದ್ದು ಕಲ್ಯಾಣ ಚಾಳುಕ್ಯ ಚಕ್ರವರ್ತಿ ಎರಡನೇ ತೈಲಪನಲ್ಲಿ ಸತ್ಯಾಶ್ರಯನನ್ನು ಗದಾಯುದ್ಧದಲ್ಲಿ ಸಮೀಕರಿಸಿ ಬರೆಯುವಾಗ ಈನೆಲದ ಬದುಕನ್ನು ಅನಾವರಣಗೊಳಿಸಿದ್ದಾನೆ.

ಕಲ್ಯಾಣ ಚಾಳುಕ್ಯ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಇಲ್ಲಿ ರಚನೆಯಾದ ಸಾಹಿತ್ಯ ಜಾಗತಿಕ ಗಮನ ಸೆಳೆದಿದೆ. ಕಾಶ್ಮೀರ ಮೂಲದ ಬಿಲ್ಹಣ ಬರೆದ "ವಿಕ್ರಮಾಂಕದೇವ ಚರಿತ್ರ" ಪ್ರಕಟವಾದದ್ದು ಈ ನೆಲದಲ್ಲಿ. ಮಾಸಿಮಡು ಮೂಲದ ವಿಜ್ಞಾನೇಶ್ವರನು ಬರೆದ 'ಮಿತಾಕ್ಷರ' ಇಂದಿಗೂ ಭಾರತದ ಕಾನೂನು ಸಂಹಿತೆಗೆ ಮೂಲವಾಗಿದೆ. ೬ನೇ ವಿಕ್ರಮಾದಿತ್ಯನ ಮಗ ಮೂರನೇ ಸೋಮೇಶ್ವರನ "ಮಾನಸೊಲ್ಲಾಸ" ಅಭಿಲಾಷಿತಾರ್ಥ ಚಿಂತಾಮಣಿ' ವಿಶ್ವಕೋಶ ಬಹುದೊಡ್ಡ ಕಾಣಿಕೆಯಾಗಿದೆ.

ಅಂಕಗಣಿತದ ದೋಷ ಸರಿಪಡಿಸಲು ಬೀಜಗಣಿತ ನೀಡಿದವ ಬೀದರ ಮೂಲದ ಭಾಸ್ಕರನು ಉಜ್ಜೈನಿಯಲ್ಲಿ ನೆಲೆಸಿದನು.

ಬೀದರ ಸಾಹಿತ್ಯ:

ಕೆಲವೊಬ್ಬರನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಭರವಸೆಗಳಿಲ್ಲದ ಬಿಕ್ಕಟ್ಟು ಸೃಷ್ಠಿಯಾಗುತ್ತಿದೆ. ಇದಕ್ಕೆ ಜೀವನಾನುಭವದ, ಓದಿನ ಕೊರತೆ ಎದ್ದು ಕಾಣುತ್ತಿದೆ. ನಮ್ಮ ನಮ್ಮ ಮಧ್ಯ ಅರಿವನ್ನು ಹಂಚಿಕೊಳ್ಳುವ ಆಲೋಚನೆ ಇಲ್ಲ. ಹಾಗಂತ ಇಲ್ಲಿ ಕತ್ತಲೆಕೂಡ ಇಲ್ಲ. ಹೊಸದರ ನಿರೀಕ್ಷೆಯಲ್ಲಿರಬೇಕಾಗಿದೆ. ಅದಕ್ಕೆ ಬೇಕಾಗುವ ಸಿದ್ಧತೆಗಳನ್ನು ರೂಪಿಸಿಕೊಳ್ಳಬೇಕಾಗಿದೆ. ನ್ಮಮ ಯುವಕರು ಬರವಣಿಗೆ ಫ್ಯಾಷನ್ನಿನ ಸರಕ್ಕಾಗಿ, ವೇದಿಕೆಯ ಸಾಧನವಾಗಿ ಮಾತ್ರ ಬೆಳೆಯದೇ ಬರಹದ ಮೂಲಕ ಬದುಕನ್ನು ಕಟ್ಟಬೇಕಾಗಿದೆ.

ಸಾಹಿತ್ಯ ನಮ್ಮಲ್ಲಿ ತಲ್ಲಣವುಂಟು ಮಾಡದಿದ್ದರೆ ಅದು ಸಾಹಿತ್ಯವಲ್ಲ. ಚಿಂತನೆಗೆ ಹಚ್ಚುವ ಸಾಹಿತ್ಯ ಸೃಷ್ಠಿಯಾಗಬೇಕು. ಸಾಹಿತ್ಯವೆಂದರೆ ಕೇವಲ ಕವಿತೆ ಮಾತ್ರ ಅಲ್ಲ. ಸೃಜನಶೀಲ ಕಾವ್ಯ ಓದುವ ಕಾಲದಿಂದ ದೂರ ಸರಿದಿದ್ದೇವೆ. ಅದು ಕಲೆ, ಕಲೆಗಾಗಿ ಎಂಬ ನಿಲುವಿನದು. ಕಲೆ

ಸಮಾಜಕ್ಕಾಗಿ, ಕಲೆ ಬದುಕಿಗಾಗಿ ಎಂಬ ನಿಲುವಿನ ಮೂಲಕ ಯೋಚಿಸಬೇಕಾಗಿದೆ. ಅನುವಾದವೂ ಒಂದು ಸಾಹಿತ್ಯ, ಗಣಿತ ಮಾಹಿತಿ ತಂತ್ರಜ್ಞಾನ, ಸಾಫ್ಟವೇರ್, ಎಲ್ಲವೂ ಕನ್ನಡದಲ್ಲಿ ತರಬೇಕು. ಕನ್ನಡ ಹೇಳಿಕೊಳ್ಳುವಷ್ಟು ಆತಂಕದ ಸ್ಥಿತಿಯಲ್ಲಿಲ್ಲ. ಹೊಸ ತಂತ್ರಜ್ಞಾನದ ಸ್ಪರ್ಶದಿಂದ ಹೊಸ ಕನ್ನಡಲೋಕ ತೆರೆದು ಕೊಂಡಿದೆ. ಕನ್ನಡದ ಮೂಲಕ ವಿಶ್ವದ ಜ್ಞಾನ ಸಂಪಾದಿಸುವ ಕಾಲದಲ್ಲಿದ್ದೇವೆ. ದಿನಕ್ಕೆ ಹತ್ತರಂತೆ, ವರ್ಷಕ್ಕೆ ೩೫೦೦ಪುಸ್ತಕ ಪ್ರಕಟವಾಗುತ್ತಿವೆ. ಹಿಂದಿಗಿಂತಲೂ ಇಂದು ಹೆಚ್ಚು ದಾರಿ ತೆರೆದುಕೊಂಡಿವೆ. ಇದೆಲ್ಲವನ್ನು ನಮ್ಮ ಯುವ ಲೇಖಕರು ಸಹಸ್ಪಂದಿಸಬೇಕು. ಅಂದಾಗ ಕನ್ನಡ ಬದುಕು ಮತ್ತು ಸಾಹಿತ್ಯ ಜೊತೆಯಾಗಿಯೇ ಬೆಳೆಯುತ್ತದೆ.

ಬೀದರ ಕಲೆ, ಸಾಹಿತ್ಯ, ಸಂಸ್ಕೃತಿ ತಕ್ಕ ಮಟ್ಟಿಗೆ ಸಮೃದ್ಧವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಹಿರಿಯರಾದ ಪಂಚಾಕ್ಷರಿ ಪುಣ್ಯಶೆಟ್ಟಿ, ಹಣಮಂತಪ್ಪಾ ಪಾಟೀಲ, ಬಾಬುರಾವ ವಡ್ಡೆ, ಡಾ.ಜಗನ್ನಾಥ ಹೆಬ್ಬಾಳೆ, ಸಿದ್ರಾಮಪ್ಪ ಮಾಸಿಮಾಡೆ, ಮೊದಲಾದವರು ಬೀದರನಲ್ಲಿ ಕನ್ನಡ ವಾತಾವರಣ ಸೃಷ್ಟಿಸಿದವರಾಗಿದ್ದಾರೆ. ಪೂಜ್ಯ ಶ್ರೀಗಳಾದ ಡಾ.ಬಸವಲಿಂಗ ಪಟ್ಟದೇವರು, ಭಾಲ್ಕಿ ಹಿರೇಮಠ ಸಂಸ್ಥಾನದ ಮೂಲಕ, ಚನ್ನವೀರ ಮಹಾಸ್ವಾಮಿ ಹಾರಕೂಡ ಮಠ, ಪೂಜ್ಯಶ್ರೀ ಶಿವಾನಂದ ಮಹಾಸ್ವಾಮಿಗಳ ಸಂಸ್ಥಾನ ಮಠ ಹುಲಸೂರ, ದೇಶಾಂಸ ಹುಡಗಿ, ಹಂಸಕವಿ, ಧರಿನಾಡ ಕನ್ನಡ ಸಂಘ, ಮೊದಲಾದ ಪ್ರಕಾಶನ ಸಂಸ್ಥೆಗಳು ಪುಸ್ತಕ ಸಂಸ್ಕೃತಿ ಬೆಳೆಸುತ್ತಿರುವುದು ಶ್ಲಾಘನೀಯವಾಗಿದೆ.

ಯುವ ಸಾಹಿತಿಗಳಿಗೆ ಪ್ರೋತ್ಸಾಹದಾಯಕವಾಗಿ ನಿಂತವರೆಂದರೆ ಪ್ರೊ. ವೀರೇಂದ್ರ ಸಿಂಪಿ, ಡಾ ಜಿ.ಬಿ ವಿಸಾಜಿ, ಬಿ.ಆರ್.ಕೊಂಡ, ದೇವುಪತ್ತಾರ, ರಿಷಿಕೇಶ ಬಹಾದ್ದೂರ್, ಸ.ದಾ. ಜೋಶಿ, ಅಪ್ಪಾರಾವ್ ಸೌದಿ, ಮಾರುತಿ ಸೋನಾರ್, ಶಿವರಾಜ ಕನಶೆಟ್ಟಿ, ನಾಗಶೆಟ್ಟಿ ಧರಂಪೂರ, ಶಶಿ ಬಂಬುಳಗೆ, ಮೊದಲಾದವರನ್ನು ಹೆಸರಿಸಬಹುದು.

ಯುವ ಸಾಹಿತಿಗಳ ಒಂದು ದೊಡ್ಡ ಪಡೆಯೇ ನಮ್ಮಲ್ಲಿದೆ. ಅವರಲ್ಲಿ ವಿಕ್ರಮ ವಿಸಾಜಿ, ಡಾ.ಶಿವಗಂಗಾ ರುಮ್ಮಾ, ಡಾ.ಇಂದುಮತಿ ಪಾಟೀಲ, ಡಾ.ಗವಿಸಿದ್ದಪ್ಪಾ ಪಾಟೀಲ, ಶಿವಕುಮಾರ ಕಟ್ಟೆ, ಓಂಪ್ರಕಾಶ ಧಡ್ಡೆ, ರಮೇಶ ಬೀರಾದರ, ಸಂಜೀವ ಕುಮಾರ ಅತಿವಾಳೆ, ಶಾಮ ನೆಲವಾಡೆ, ಸೂರ್ಯಕಾಂತ ನಿನ್ನೆಕರ್, ಇಂದುಮತಿ ಬಂಡಿ, ಶಾಂತಮ್ಮ ಬಲ್ಲೂರ, ಅಶೋಕ ಕುಮಾರ

ಎರನಳ್ಳಿ, ಚನ್ನಮ್ಮಾ ವಲ್ಲೇಪುರೆ, ಮಲ್ಲೇಶ್ವರಿ ಉದಯಗಿರಿ, ರಮೇಶ ಮೂಲಗೆ, ರಘಶಂಖ ಭಾತಂಬ್ರ, ಅಶೋಕ ಕೋರೆ, ಶುಭಾಷ್ ನೇಳಗೆ, ಎಂ.ಪಿ.ಮುದಾಳೆ, ಚಂದ್ರಕಾಂತ ಪಾಟೀಲ, ಪ್ರಭುಶೆಟ್ಟಿ ಸೈನಿಕಾರ, ಚನ್ನಬಸವ ಹೇಡೆ, ಗಂಗಾಬೀಕಾ ಪಾಟೀಲ, ಮಹೇಶ್ವರಿ ಹೇಡೆ, ಶಿವಲಿಂಗ ಹೇಡೆ, ಉಮಾ ಬಾಪೂರೆ, ಜಗದೇವಿ ದುಬಲಗುಂಡೆ, ಕನ್ಯಾಕುಮಾರಿ ಮೂಲಗೆ, ಎಂ ಮುಕ್ತುಂಬಿ, ಮಯೂರ ಬಸವರಾಜ, ರುಕ್ಮೋದ್ದಿನ್ ಇಸ್ಲಾಂಪೂರ್, ವೀರಶೆಟ್ಟಿ ಚೌಕನಪಳ್ಳಿ, ಅರುಂಧತಿ ಚಾಂದಕವತೆ, ಸುಮನ್ ಹೆಬ್ಬಾಳಕರ್, ಜಗದೇವಿ ಗಾಯಕವಾಡ್, ಭೀಮಾ ಶಂಕರ ಬೀರಾದರ. ಮಾಣಿಕ ಭೂರೆ, ರುದ್ರಮಣಿ ಮಠಪತಿ, ಜಗನ್ನಾಥ ಕಮಲಾಪೂರೆ, ಡಾ.ಬಂಡಯ್ಯ ಸ್ವಾಮಿ, ಟಿ.ಎಂ ಮಚ್ಚೆ, ದೇವೆಂದ್ರ ಕರಂಜೆ, ಸಂಜೀವಕುಮಾರ ಜುಮ್ಮಾ, ಮೊದಲಾದವರು.

ಕನ್ನಡ ಸಾಹಿತ್ಯದ ಸ್ವೋಪಜ್ಞತೆ:

ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆ ಸ್ಥಾನ ಘೋಷಣೇಯಾಗಿದ್ದು, ಶಾಸ್ತ್ರೀಯ ಸ್ಥಾನ ನೀಡಲು ಆಗಿನ ಭಾಷೆಯ ಸಾಹಿತ್ಯ ಪ್ರಾಚೀನತೆ ಹೊಂದಿರಬೇಕು ಸ್ವತಂತ್ರ ಲಿಪಿ ಮೊದಲಾದ ಅರ್ಹತೆಗಳೊಂದಿಗೆ ಸ್ವೋಪಜ್ಞತೆ ಇರಬೇಕೆಂದು ಹೇಳಲಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸ್ವೋಪಜ್ಞತೆಯ ಮಾತು ಬಂದಾಗ ವಚನ ಸಾಹಿತ್ಯಕ್ಕೆ ಅದು ಹೆಚ್ಚು ಅನ್ವಯವಾಗುತ್ತದೆ. ಸ್ವೋಪಜ್ಞತೆ ಎಂದರೆ ಸ್ವಂತಿಕೆ ಎಂದರ್ಥ. ವಸ್ತು, ಭಾಷೆ, ಶೈಲಿ, ಜೀವನ ವಿಧಾನ ವೈಯಕ್ತಿಕ ನಂಬಿಕೆ ಮೊದಲಾದ ಅಂಶಗಳು ಒಳಗೊಂಡಿದ್ದು ಅದೆಲ್ಲ ವಚನ ಸಾಹಿತ್ಯದಲ್ಲಿದೆ. ಚಂಪೂ ಕವಿಗಳು ಅನ್ಯ ಭಾಷಾ ಸಾಹಿತ್ಯ ಪ್ರಭಾವದಿಂದ ಮಾರ್ಗಪರಂಪರೆ ಅನುಸರಿಸಿದ್ದು, ಸಂಸ್ಕೃತ ಕನ್ನಡದ ಸಮಬೆರಕೆ, ಪುರಾಣ ಚರಿತ್ರೆಯ ಸಿದ್ಧ ಕಥಾವಸ್ತು ಆಯ್ದುಕೊಂಡಿದ್ದಾರೆ. ವಚನಕಾರರು ಹಾಗಲ್ಲ. ಬದುಕನ್ನು ವಸ್ತುವಾಗಿಟ್ಟುಕೊಂಡು ಸಾಹಿತ್ಯವನ್ನು ಸಮಕಾಲೀನಗೊಳಿಸುವ ಮೂಲಕ ಸಾಹಿತ್ಯದಲ್ಲಿ, ಭಾಷೆಯಲ್ಲಿ ಸ್ವೋಪಜ್ಞತೆ ಮೆರೆಯಲಾಗಿದೆ.

'ವಚನ'ವೆಂಬ ನೂತನ ರೂಪವನ್ನು ಪರ್ಯಾಯ ಸಮಾಜವನ್ನು ಕಟ್ಟಲು, ಸ್ಥಾಪಿತ ಮನುಧರ್ಮವನ್ನು ಮುರಿದು ಧರ್ಮದ ಸರಳೀಕರಣಗೊಳಿಸುವ ಮೂಲಕ ಚಾತುರ್ವರ್ಣ್ಯವನ್ನು ಧಿಕ್ಕರಿಸಿ ನಿಂತದ್ದು. ಮನುಕುಲ ಚರಿತ್ರೆಯಲ್ಲಿಯೂ ಅಪರೂಪದ ಪ್ರಸಂಗ. ರಾಜ ಮತ್ತು ಸಾಹಿತ್ಯದ

ಸಮೀಕರಣದ ಬದಲಾಗಿ, ಬದುಕು ಮತ್ತು ಬರಹದ ಸಮೀಕರಣವಾದದ್ದು, ಈ ನೆಲದಲ್ಲಿ. ವರ್ಣ, ವರ್ಗ, ಲಿಂಗ, ಜಾತಿ ಮೊದಲಾದ ವಿಷಮತೆಗಳನ್ನು ಕಿತ್ತೆಸೆದರು.

ಕನ್ನಡತ್ವದ ನೆಲೆಗಳು:

ಕನ್ನಡವೆಂದರೆ ಕೇವಲ ಭಾಷೆಅಲ್ಲ, ಸಾಹಿತ್ಯ ಅಲ್ಲ, ನಾಡು ನುಡಿ, ನೆಲ, ಜಲ, ಜನ, ಜನಾಂಗ, ಜಾತಿ-ಧರ್ಮ ಮತ ಪಂಥ, ಆಚಾರ, ವಿಚಾರ, ಸಂಸ್ಕೃತಿ ಹೀಗೆ ಬದುಕಿನ ಎಲ್ಲಾ ಆಯಾಮ ಸೇರಿ ಕನ್ನಡ ಆದ್ದರಿಂದ ಕನ್ನಡ ಎಂದರೆ ಬದುಕು.

'ಅಮ್ಮ' ಎಂದರೆ ಹೇಗೆ ಕೇವಲ ತಾಯಿ ಜನನಿ, ಎಂಬ ಶಬ್ದಾರ್ಥಕ್ಕೆ ಸೀಮಿತವಾಗದೇ ಪ್ರೀತಿ, ಮಮತೆ, ಕರುಣೆ, ವಾತ್ಸಲ್ಯ, ಅನುಕಂಪ, ದಯೇ, ಸ್ನೇಹ, ಸಿಟ್ಟು, ಆಕ್ರೋಶ, ಪೆಟ್ಟು, ಆದರ, ಗೌರವ, ಹೀಗೆ ಎನೆಲ್ಲವೂ ಆಗಿದೆಯೋ ಹಾಗೆಯೇ ಕನ್ನಡ ಕೂಡ. ಆದ್ದರಿಂದಲೇ ತಾಯಿ-ತಾಯಿ ನೆಲ ಸ್ವರ್ಗಕ್ಕೆ ಸಮ ಎಂಬುದು ಯಾವತ್ತೂ ಪ್ರಸ್ತುತ.

ವ್ಯಕ್ತಿಯ ಸಮಗ್ರ ವ್ಯಕ್ತಿತ್ವ ಬೆಳೆಯುವುದು ಲೋಕಜ್ಞಾನ ದಕ್ಕುವುದು, ಗ್ರಹಿಸುವುದು ಹಾಗೂ ಅಭಿವ್ಯಕ್ತಿಸುವುದು ಮಾತೃ ಭಾಷೆಯಿಂದ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಯ ಮೂಲಧಾತು. 'ಅರಿವು' ಭಾಷೆಯಿಂದ ಮಾತ್ರ ದಕ್ಕುತ್ತದೆ. ಆದ್ದರಿಂದ ಭಾಷೆ ಎಲ್ಲ ಜ್ಞಾನ ಶಿಸ್ತುಗಳ ಮಾತೃ ಸ್ಥಾನದಲ್ಲಿದೆ.

ನಮ್ಮ ಮಧ್ಯದ ಯಾವುದೇ ವಿಷಯ ವಸ್ತುವಿರಲಿ, ಕಲೆ, ವಿಜ್ಞಾನ, ಸಮಾಜವಿಜ್ಞಾನ ಮಾಹಿತಿ ತಂತ್ರಜ್ಞಾನ ಒಳಗೊಂಡಂತೆ ಎಲ್ಲವೂ ಮಾತೃಭಾಷೆಯಿಂದಲೇ ಅರಗಿಸಿಕೊಳ್ಳುತ್ತೇವೆ.

ಆದ್ದರಿಂದ ಕನ್ನಡತ್ವವನ್ನು ಅಭಿಮಾನದ ಮೂಲಕ ಬೆಳೆಸಿಕೊಳ್ಳಬೇಕಾಗಿದೆ. ಅದು ಕೇವಲ 'ನವ್ಹೆಂಬರ' ತಿಂಗಳ ಕೊರಳ ಅಭಿಮಾನವಾಗದೆ ನಿರಂತರ ಕರುಳ ಅಭಿಮಾನವಾಗಬೇಕು.

ಭಾಷೆ ಸಂಸ್ಕೃತಿಗೆ ಗಡಿಗಳಿಲ್ಲ:

ಮಾನವ ಪ್ರಾಣಿಗಳಿಂದ ಭಿನ್ನವಾದುದ್ದೇ ಭಾಷೆಯ ಬಳಕೆಯಿಂದ. ಈ ಭಾಷೆಗೆ ಆನಂದ, ಜ್ಞಾನ, ಮತ್ತು ಅಭಿವ್ಯಕ್ತಿಯೆಂಬ ಆಯಾಮಗಳಿವೆ. ಆದ್ದರಿಂದ ಭಾಷೆಯನ್ನು ಉಳಿಸಿಕೊಳ್ಳುವುದು

ಎಂದರೆ, ನಮ್ಮ ಸಾಂಸ್ಕೃತಿಕ ಆಯಾಮಗಳನ್ನು ಉಳಿಸಿಕೊಳ್ಳುವುದು ಎಂದೇ ಅರ್ಥ.

ಜಾಗತೀಕರಣದ ಕರಿನೆರಳಿನಿಂದ ಪ್ರಪಂಚದ ಏಳು ಸಾವಿರ ಭಾಷೆಗಳಲ್ಲಿ ಹದಿನೈದು ದಿನಕ್ಕೆ ಒಂದು ಭಾಷೆ ಸಾಯುತ್ತಿರುವ ಅಘಾತಕಾರಿ ಸುದ್ದಿ ವರದಿಯಾಗಿದೆ. ಒಂದು ಭಾಷೆಯ ಅವಸಾನವೆಂದರೆ ಶತಶತಮಾನಗಳಿಂದ ಭಾಷೆಯ ವಾಹಕವಾಗಿ ಬಂದ ಜ್ಞಾನದ ತಿಳವಳಿಕೆಯ ಮತ್ತು ಒಂದು ಜನಾಂಗದ ಒಟ್ಟು ಸಂಸ್ಕೃತಿಯ ಅವಸಾನವೆಂದೇ ಹೇಳಲಾಗುತ್ತದೆ. ಇಂತಹ ಬಿಕ್ಕಟ್ಟಿನಲ್ಲಿ ನಮ್ಮ ಸಹೋದರ ಭಾಷೆಗಳು 'ಗಡಿ' ಕ್ಯಾತೆ ತೆಗೆಯುವುದು ಸೂಕ್ತವೆ?. ಜಗತ್ತಿನ ಎಲ್ಲ ಭಾಷೆಗಳ ಬಗ್ಗೆ ಗೌರವವಿರಬೇಕು. ಮಾತೃಭಾಷೆಯನ್ನು ಮೊದಲು ಪ್ರೀತಿಸಬೇಕು. ಈ ಭಾಷಾಂಧತೆ ಮತಾಂಧತೆಗಿಂತ ಅಪಾಯಕಾರಿಯಾದದ್ದು.

ಪ್ರಾಂತ ರಚನೆಗೆ ಇದ್ದ ಭಾಷಾವಾರು ಗಡಿ ಇಂದು ಅಗತ್ಯವಿಲ್ಲ. ವ್ಯವಹಾರದ ಸರಳೀಕರಣಕ್ಕಾಗಿ ಇರುವ ಭಾಷೆ ಆಯಾ ಪ್ರದೇಶದಿಂದ ಸಾಂಸ್ಕೃತಿಕ ಬದುಕನ್ನು ಒಳಗೊಂಡಿರುತ್ತದೆ. ಇದೆಲ್ಲ ಗ್ರಹಿಸಿಕೊಳ್ಳಬೇಕು.

ಒಂದು ದೇಹಕ್ಕೆ ಪ್ರತ್ಯೇಕ ಅಂಗಾಂಗಗಳಿದ್ದಂತೆ ಒಂದು ದೇಶಕ್ಕೆ ಪ್ರದೇಶವಾರು ಭಾಷೆಗಳಿವೆ. ಅವೆಲ್ಲ ಸಾವಯವ ಸಂಬಂಧ ಮತ್ತು ಸಹಯೋಗದಿಂದ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಮಾತೃ ಭಾಷೆ 'ಕಣ್ಣು' ಅನ್ಯಭಾಷೆ 'ಕಾಲು' ಆಗಿರಬೇಕು. ಅಂದಾಗ ಒಂದು ದೂರದೃಷ್ಟಿ-ಅದಕ್ಕೊಂದು ಚಲನೆ ಸಾಧ್ಯವಾಗುತ್ತದೆ.

ಹಾಗೆ ನೋಡಿದರೆ ಜನಸಾಮಾನ್ಯರಿಗೆ ಈ ಗಡಿತಂಟೆ ಬೇಕಿಲ್ಲ. ಇದು ಕೇವಲ ರಾಜಕೀಯ ಗಡಿ, ಓಟ್ ಬ್ಯಾಂಕಿನ ಗಡಿಯಾಗಿದೆ. ಆದ್ದರಿಂದ ಭಾಷೆ ಸಂಸ್ಕೃತಿಗೆ ಗಡಿಗಳಿಲ್ಲ.

ಮಹಾರಾಷ್ಟ್ರ ಮೂಲದ ಡಾ.ಜಯದೇವಿತಾಯಿ ಲಿಗಾಡೆ ಅವರು 'ಅಖಿಲ ಭಾರತ ಕನ್ನಡ ಸಾಹಿತ್ಯ ಸ್ಮಮೇಳನದ' ಅಧ್ಯಕ್ಷರಾಗಿರುವುದು, ಬೆಳಗಾವಿ ಮೂಲದ ಉತ್ತಮಕಾಂಬಳೆ ಮಹಾರಾಷ್ಟ್ರದ ಅಖಿಲ ಭಾರತ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು, 'ಗಡಿ' ಒಡೆದದ್ದಲ್ಲವೆ? ಮಹಾರಾಷ್ಟ್ರದ 'ಪಂಢರಪುರ ವಿಠಲ'ನಿಗೆ ಕನ್ನಡಿ ವಿಠಲವೆಂದು ಕರೆಯುವುದು, ತೆಲುಗು ಮೂಲದ ಭೀಮ ಕವಿ ಬಸವ ಪುರಾಣಬರೆದದ್ದು, ಭಾಷಿಕ ಗಡಿಗಳನ್ನು ಮೀರಿದಲ್ಲವೆ ?

ಈ ಹೊತ್ತಿನ ಅಗತ್ಯಗಳು:

ಸಮಕಾಲೀನ ಜಗತ್ತು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಲೇ ಅನೇಕ ಬಿಕ್ಕಟ್ಟುಗಳು ಸೃಷ್ಟಿಯಾಗಿವೆ. ಇದರಿಂದ ನಾಡು, ನುಡಿ, ನೆಲ, ಜನ, ಜಲ, ಮೊದಲಾದವುಗಳ ಮೇಲೆ ಅಡ್ಡಪರಿಣಾಮ ಬೀರಿವೆ. ಒಂದು ನಾಡಿನ ಸಮಗ್ರ ಅಭಿವೃದ್ಧಿ ಆಗಬೇಕಾದರೆ ಈ ಹೊತ್ತಿನ ಅಗತ್ಯತೆಗಳನ್ನು ಪೂರೈಸಿಕೊಳ್ಳಬೇಕಾಗಿದೆ.

ಮೂಲಭೂತ ಸಮಸ್ಯೆಗಳು:

- ಬೀದರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬಹುತೇಕ ರಸ್ತೆಗಳು ಹದಗೆಟ್ಟಿವೆ. ರಸ್ತೆಗಳ ಸುಧಾರಣೆಯಾಗಬೇಕು, ಪ್ರತಿ ಗ್ರಾಮಕ್ಕೂ ಡಾಂಬರೀಕರಣದ ರಸ್ತೆ ನಿರ್ಮಾಣವಾಗಬೇಕು.
- ಜಿಲ್ಲಾ ಕೇಂದ್ರದಿಂದ ಪ್ರತಿ ಗ್ರಾಮಕ್ಕೂ ನೇರ ಸಂಪರ್ಕದ ವ್ಯವಸ್ಥೆಯಾಗಬೇಕು.
- ಜಿಲ್ಲಾದ್ಯಂತ ಬಹುತೇಕ ಹಳ್ಳಿಗಳು ಕುಡಿಯುವ ನೀರಿನ ಸಮಸ್ಯೆ ಹೊಂದಿವೆ. ಆದ್ದರಿಂದ ಅಂತಹ ಗ್ರಾಮಗಳ ಪಟ್ಟಿ ತಯಾರಿಸಿ, ನಿಗದಿತ ಅವಧಿಯಲ್ಲಿ ನೀರಿನ ಸರಬರಾಜು ಆಗಬೇಕು.
- ನಗರ ಹಾಗೂ ಪಟ್ಟಣಗಳಿಗೆ ಸರಬರಾಜಾಗುವ ನೀರು ಶುದ್ಧೀಕರಣವಾಗುತ್ತಿಲ್ಲ. ಆದ್ದರಿಂದ ಶುದ್ಧ ನೀರು ಪೂರೈಸುವ ವ್ಯವಸ್ಥೆಯಾಗಬೇಕು. (ಇಲಿ ಜ್ವರ, ಡೆಂಗೆ ಜ್ವರ, ಕೋಳಿ ಜ್ವರ, ಮೊದಲಾದ ಸಾಂಕ್ರಾಮಿಕ ರೋಗಗಳು ಹಂಡುವುದು ಅಶುದ್ಧ ನೀರಿನಿಂದಲೇ ಎಂಬುವುದು ವೈದ್ಯಕೀಯ ವರದಿಯಲ್ಲಿ ದೃಢಪಟ್ಟಿದೆ.)
- ಎಲ್ಲಾ ತಾಂಡಾ, ವಾಡೆಗಳಿಗೆ ರಸ್ತೆ ಒದಗಿಸುವುದರೊಂದಿಗೆ ವಿದ್ಯುಚ್ಛಕ್ತಿ ಸರಬರಾಜಾಗಬೇಕು.
- ಬೀದರ – ಗುಲಬರ್ಗಾ ರೈಲು ಮಾರ್ಗ ಶೀಘ್ರಗತಿಯಲ್ಲಿ ಪೂರ್ಣಗೊಳಿಸಬೇಕು. ಇದರಿಂದ ದೇಶದ ರಾಜಧಾನಿ ದೆಹಲಿಗೆ ತಲುಪುವ ಮಾರ್ಗದಲ್ಲಿ ತಮಿಳುನಾಡು ಮತ್ತು ಕೇರಳದ ಜನರು ಒಳಗೊಂಡಂತೆ ಈ ಭಾಗದವರಿಗೆ ಸುಮಾರು ೫೦೦ ಕಿ.ಮೀ ದಾರಿ ಮತ್ತು ಸುಮಾರು ಎಂಟು ತಾಸು ಅವಧಿಯ ಉಳಿತಾಯವಾಗುತ್ತದೆ.

- ಭಾರತದಲ್ಲಿಯೇ ಉತ್ತಮ ರಕ್ಷಣಾ ವಿಮಾನ ತರಬೇತಿ ಕೇಂದ್ರ ಬೀದರನಲ್ಲಿದೆ. ಅದಕ್ಕೆ ತಕ್ಕ ವಾತಾವರಣವೂ ಇದೆ. ಅಲ್ಲದೆ ವಿಮಾನಯಾನಕ್ಕೆ ಬೇಕಾಗುವ ಎಲ್ಲಾ ರೀತಿಯ ಸೌಲಭ್ಯಗಳಿದ್ದರೂ ಸಹ ಇಂದಿಗೂ ನಾಗರಿಕ ವಿಮಾನಯಾನ ಸೇವೆ ಆರಂಭಗೊಂಡಿಲ್ಲ.
- ಜಿಲ್ಲೆಯ ಎಲ್ಲ ಪಟ್ಟಣಗಳಲ್ಲಿ ಒಳಚರಂಡಿಯ ವ್ಯವಸ್ಥೆ ಇಲ್ಲ.
- ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳನ್ನು ಬಲಪಡಿಸಿ ಶ್ರೀಸಾಮಾನ್ಯರಿಗೂ ಆರೋಗ್ಯ ಸೌಲಭ್ಯಗಳನ್ನು ಗುಣಮಟ್ಟದೊಂದಿಗೆ ದೊರಕುವಂತೆ ವ್ಯವಸ್ಥೆಗೊಳಿಸುವುದು.
- ನಾಗರಿಕ ಫೋರಂ (ಸಮಿತಿ) ಒಂದನ್ನು ರಚಿಸಿ ಕನಿಷ್ಠ ಪಾಕ್ಷಿಕ ಅಥವಾ ಮಾಸಿಕ ಸಭೆ ಸೇರಿ ಜಿಲ್ಲೆಯ ಸಮಸ್ಯೆಗಳನ್ನು ಚರ್ಚಿಸಬೇಕು. ಇದರಲ್ಲಿ ಜನಪ್ರತಿನಿಧಿಗಳು ಭಾಗವಹಿಸುವಂತೆ ಯೋಜನೆಯನ್ನು ರೂಪಿಸಬೇಕು.
- ಶಾಸಕರ ನಿಧಿಯಲ್ಲಿ ಹೆಚ್ಚಿನ ಅನುದಾನವನ್ನು ರಸ್ತೆ(ಸಂಚಾರ)ಗಾಗಿ ಬಳಸುವಂತೆ ಯೋಜನೆ ರೂಪಿಸಬೇಕು.

ಶಿಕ್ಷಣ:

- ಜಿಲ್ಲೆಯ ಬಹುತೇಕ ಶಾಲೆಗಳಿಗೆ ಕೊರತೆ ಇರುವ ಶಿಕ್ಷಕರ ನೇಮಕಾತಿಯಾಗಬೇಕು. ಸಕಲ ಸೌಲಭ್ಯಗಳ ವಿಸ್ತರಣೆಯಾಗಬೇಕು. ವಿಶೇಷವಾಗಿ ನೀರು, ಶೌಚಾಲಯ ವ್ಯವಸ್ಥೆಯಾಗಬೇಕು.
- ಅಭಿವೃದ್ಧಿಯ ಮೂಲವೇ ಶಿಕ್ಷಣವಾಗಿರುವುದರಿಂದ ಶೈಕ್ಷಣಿಕ ಪ್ರಗತಿಗಾಗಿ ವರ್ಷವಿಡೀ ನಿರಂತರ ಶಿಕ್ಷಕರಿಗೆ ತರಬೇತಿ ನೀಡುವ ತರಬೇತಿ ಕೇಂದ್ರವನ್ನು ತುರ್ತಾಗಿ ತೆರೆಯಬೇಕು.
- ಅಗತ್ಯವಿರುವ ಕಡೆ ಶಾಲಾ ಕಾಲೇಜುಗಳನ್ನು ಆರಂಭಿಸುವ ವ್ಯವಸ್ಥೆಯಾಗಬೇಕು.
- ಪಠ್ಯಕ್ರಮದಲ್ಲಿ ಜೀವನಪ್ರೀತಿ, ನೀತಿ, ಮೌಲ್ಯಗಳೊಂದಿಗೆ ರಾಷ್ಟ್ರಪ್ರೇಮ, ಪರಿಸರ, ಜನಪರ ಕಾಳಜಿಯ ಸುಧಾರಣೆಯ ಪರವಾದ ಪಠ್ಯಗಳನ್ನು ಅಳವಡಿಸಬೇಕು.

- ಉನ್ನತ ಶಿಕ್ಷಣದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಮಾನವಿಕ ವಿಷಯಗಳನ್ನು ಅಳವಡಿಸಬೇಕು.
- ಈಗಾಗಲೇ ಕೆಲವು ಹೊಸ ಪದವಿ ಕಾಲೇಜುಗಳು ಆರಂಭವಾಗಿವೆ. ಆದರೆ ಬೀದರ ಜಿಲ್ಲೆಗೆ ಒಂದೂ ಮಂಜೂರಾಗಿಲ್ಲ.

ಆಡಳಿತ:

- ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಅತೀ ಶೀಘ್ರದಲ್ಲಿ ತುಂಬಬೇಕು.
- ಜಿಲ್ಲೆಯಲ್ಲಿ ಎಫ್.ಎಂ. ರೇಡಿಯೋ ಕೇಂದ್ರವನ್ನು ಸ್ಥಾಪಿಸುವ ಮೂಲಕ ಕನ್ನಡ ಪರ ಶೈಕ್ಷಣಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿ ಕನ್ನಡ ಬೆಳವಣಿಗೆಗೆ ಪೂರಕವಾಗುವ ಪ್ರಸಾರ ಕಾರ್ಯ ಜರುಗಿಸಬೇಕು.
- ಕಾಲಕಾಲಕ್ಕೆ ಅಧಿಕಾರಕ್ಕೆ ಬರುವ ಸರ್ಕಾರಗಳು ವಿಶೇಷ ಪ್ಯಾಕೇಜುಗಳನ್ನು ಘೋಷಿಸುವುದು ಸಾಮಾನ್ಯವಾಗಿದೆ. ಆದರೆ ಘೋಷಿಸಿದ ಪ್ಯಾಕೇಜುಗಳನ್ನು ಕಡ್ಡಾಯವಾಗಿ ಕಾರ್ಯರೂಪಕ್ಕೆ ತರುವ ಕಾನೂನು ರಚನೆಯಾಗಬೇಕು.
- ಪ್ರತಿ ಶಾಸಕರಿಗೆ ಜನಸೇವೆಗಾಗಿ, ಅಭಿವೃದ್ಧಿಪರ ಕಾರ್ಯರೂಪಿಸಲು ನೆರವಾಗುವಂತೆ ಸರಕಾರವೇ ಕನಿಷ್ಠ ತರಬೇತಿಯನ್ನು ನೀಡಬೇಕು.
- ಶಾಸಕರು ತಮ್ಮ ಅವಧಿಯ ಕನಿಷ್ಠ ಅರ್ಧದಷ್ಟು ದಿನಗಳಾದರೂ ತಮ್ಮ ಸ್ವಂತ ಕ್ಷೇತ್ರಗಳ ಗ್ರಾಮಗಳಲ್ಲಿ ಇರಬೇಕು.
- ಗ್ರಾಮ ಪಂಚಾಯತಿಗಳಲ್ಲಿ ಕಾರ್ಯದರ್ಶಿಗಳು ಯಾವುದೇ ಕಡತಗಳನ್ನು ವ್ಯವಸ್ಥಿತವಾಗಿ ಇಟ್ಟಿಲ್ಲ. ಅವೆಲ್ಲವುಗಳನ್ನು ಸಕ್ರಮಗೊಳಿಸುವಂತೆ ಕಾನೂನು ರೂಪಿಸಬೇಕು.

ಪ್ರಾದೇಶಿಕತೆ:

- ಸುಮಾರು ೧೦ರಿಂದ ೧೨ ಅಕಾಡೆಮಿಗಳಿದ್ದರೂ ಬೀದರ ಜಿಲ್ಲೆಗೆ ಒಂದೆರಡು ಸದಸ್ಯತ್ವ ಬಿಟ್ಟರೆ ಹೆಚ್ಚಿನ ಸದಸ್ಯತ್ವ ದೊರೆಯುತ್ತಿಲ್ಲ.
- ಅಕಾಡೆಮಿಗಳು ಹಮ್ಮಿಕೊಳ್ಳುವ ಬಹುತೇಕ ಕಾರ್ಯಕ್ರಮಗಳು ಬೀದರನಲ್ಲಿ ಆಯೋಜಿಸುತ್ತಿಲ್ಲ.
- ಬೀದರಿನ ಸ್ಮಾರಕಗಳ ಸಾಂಸ್ಕೃತಿಕ ವೈವಿಧ್ಯತೆ ರಾಜ್ಯ ಮಟ್ಟಕ್ಕೆ ತಲುಪಿಸುವ ವ್ಯವಸ್ಥೆ ಆಗಿಲ್ಲ.

ಭಾಷಿಕ:

- ಇಂಗ್ಲೀಷ್ ಮಾಧ್ಯಮಕ್ಕೆ ಒತ್ತು ಕೊಡುವುದಕ್ಕಿಂತ ವೃತ್ತಿಪರ ಹಾಗೂ ಉನ್ನತ ವ್ಯಾಸಂಗವನ್ನು ಕನ್ನಡದಲ್ಲಿಯೇ ಬೋಧಿಸುವ ವ್ಯವಸ್ಥೆಯಾಗಬೇಕು. ಮತ್ತು ಅದಕ್ಕೆ ಸಂಬಂಧಪಟ್ಟ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿ ತರುವ ವ್ಯವಸ್ಥೆಯಾಗಬೇಕು. (ನೈಜಾಮರ ಕಾಲಕ್ಕೆ ಕೆಲವೇ ವರ್ಷಗಳಲ್ಲಿ ಎಲ್ಲಾ ವ್ಯಾಸಂಗವೂ ಉರ್ದುವಿನಲ್ಲಿ ನಡೆಯುತ್ತಿತ್ತು. ಈಗಲೂ ಅನೇಕ ರಾಷ್ಟ್ರಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿಯೇ ವ್ಯಾಸಂಗ ನಡೆಯುತ್ತಿತ್ತು).
- ಅಲ್ಪಸಂಖ್ಯಾತ ಜನರಲ್ಲಿ ಕನ್ನಡ ಭಾಷೆಯ ಬಗೆಗಿನ ಒಲವು ಹೆಚ್ಚಿಸಲು ವಿಶೇಷ ಯೋಜನೆಗಳನ್ನು ರೂಪಿಸಿ ಜಾರಿಗೆ ತರುವುದು.
- ಅನ್ಯಭಾಷಿಕರಿಗೆ ಕನ್ನಡ ಭಾಷೆಯನ್ನು ಕಲಿಸುವ ಮತ್ತು ಕನ್ನಡ ಭಾಷೆಯ ಬಗ್ಗೆ ವಿಶೇಷ ಒಲವು ಮೂಡುವಂತೆ ವಿಶೇಷ ಕಾರ್ಯಯೋಜನೆಯನ್ನು ರೂಪಿಸಬೇಕು.

ಗಡಿ:

- ಗಡಿಯಾಚೆ ಇರುವ ಗಡಿಗೆ ಹೊಂದಿಕೊಂಡಿರುವ ಕನ್ನಡ ಕಲಿತ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯ ಕೊಡುವುದು.
- ರಾಜ್ಯದಲ್ಲಿನ ಹಾಗೂ ಗಡಿಯಾಚೆ ಇರುವ ಕನ್ನಡ ಶಾಲೆಗಳನ್ನು ಮುಚ್ಚದಂತೆ ನೋಡಿಕೊಳ್ಳಬೇಕು.

- ಗಡಿಯಾಚೆ / ಹೊರನಾಡಿನಲ್ಲಿ ಕನ್ನಡಕ್ಕಾಗಿ ದುಡಿಯುತ್ತಿರುವ ವ್ಯಕ್ತಿ, ಸಂಸ್ಥೆಗಳಿಗೆ ನೆರವು ನೀಡುವುದು.

ಉದ್ಯೋಗ:

- ಜಿಲ್ಲೆಯಾದ್ಯಂತ ನಿರುದ್ಯೋಗ ಸಮಸ್ಯೆ ಅಧಿಕವಾಗಿರುವುದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ತರಬೇತಿ ನೀಡಿ, ಉತ್ಪಾದನೆ ಹೆಚ್ಚಿಸಲು ಅನುವು ಮಾಡಿಕೊಡುವುದರ ಜೊತೆಗೆ ಮಾರುಕಟ್ಟೆಯ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು.
- ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆಯನ್ನು ಕೊಡುವ ವ್ಯವಸ್ಥೆಯಾಗಬೇಕು.
- ಜನರಿಗೆ ಉದ್ಯೋಗ ಒದಗಿಸುವ ಉದ್ದಿಮೆಗಳನ್ನು ಸ್ಥಾಪಿಸುವುದು.
- ಬಿದ್ರಿ ಮತ್ತು ಗಂಧದ ಕಟ್ಟಿಗೆ ಇತ್ಯಾದಿ ಕರಕುಶಲ ಕಲೆಗಳ ಅಭಿವೃದ್ಧಿ ಜೊತೆಗೆ ಸೂಕ್ತ ಮಾರುಕಟ್ಟೆಯನ್ನು ಒದಗಿಸುವುದು.

ಕೃಷಿ:

- ಜಿಲ್ಲೆಯ ಆರ್ಥಿಕ ಅಭಿವೃದ್ಧಿಗಾಗಿ ಕೃಷಿ ನೀರಾವರಿಗೆ ಹೆಚ್ಚಿನ ಸೌಲಭ್ಯ ಒದಗಿಸುವುದರೊಂದಿಗೆ ತೋಟಗಾರಿಕೆಗೆ ಪ್ರೋತ್ಸಾಹದಾಯಕ ನೆರವು ಅಗತ್ಯವಾಗಿದೆ.
- ಜಿಲ್ಲೆಯಲ್ಲಿ ಪ್ರಮುಖವಾಗಿ ಉದ್ದು ಬೆಳೆಯಲಾಗುತ್ತದೆ. ಆದ್ದರಿಂದ ಅದರ ಪ್ರೋತ್ಸಾಹಕ್ಕಾಗಿ ವಿಶೇಷ ಉದ್ದು ಮಂಡಳಿ ಸ್ಥಾಪಿಸುವುದು.
- ಜಿಲ್ಲೆಯಲ್ಲಿ ಎಲ್ಲಾ ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿಗೊಳಿಸುವುದು.
- ಈ ಭಾಗದ ಮುಖ್ಯ ಜಾನುವಾರು ತಳಿಯಾದ ದೇವಣಿ ತಳಿಯನ್ನು ಉಳಿಸಿ ಬೆಳೆಸಲು ಸಂಶೋಧನ ಕೇಂದ್ರವನ್ನು ಸ್ಥಾಪಿಸುವುದು.

❖ ಕೃಷಿ ಜಾಗೃತಿಗೆ ಹೆಚ್ಚಿನ ಆದ್ಯತೆ ಕೊಡುವುದರೊಂದಿಗೆ ಹೂ, ಹಣ್ಣು, ರೇಷ್ಮೆ ಮೊದಲಾದವುಗಳನ್ನು ಅಭಿವೃದ್ಧಿ ಪಡಿಸಬೇಕು.

❖ ಶೂನ್ಯ ಬಂಡವಾಳದ ಕೃಷಿ ನೀತಿಯನ್ನು ಜನಪ್ರಿಯಗೊಳಿಸಬೇಕು.

❖ ಈ ಭಾಗದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವಂತೆ ಮೀನು, ಕೋಳಿ, ಸಾಕಾಣಿಕೆಗಳನ್ನು ಅಭಿವೃದ್ಧಿ ಪಡಿಸಬೇಕು.

ಸಾಂಸ್ಕೃತಿಕ:

❖ ಪ್ರತಿ ತಾಲೂಕಿನಲ್ಲಿ ಸಾಂಸ್ಕೃತಿಕ ಅಭಿವೃದ್ಧಿಗಾಗಿ ಸಾಂಸ್ಕೃತಿಕ ಭವನವನ್ನು ನಿರ್ಮಿಸಿ, ಸ್ಥಳೀಯ ಕಲೆ ಸಂಸ್ಕೃತಿಯನ್ನು ಉಳಿಸುವ ಕಾರ್ಯ ತುರ್ತಾಗಿ ಜರುಗಬೇಕು.

❖ ಪ್ರತಿ ತಾಲೂಕಿನಲ್ಲಿ ನಿರಂತರವಾಗಿ ಕನ್ನಡ ಪರ ಸಾಂಸ್ಕೃತಿಕ ಹಾಗೂ ಮನೋರಂಜನೆ ಕಾರ್ಯಕ್ರಮಗಳು ಜರುಗುವಂತೆ ವ್ಯವಸ್ಥೆ ಕಲ್ಪಿಸಬೇಕು.

❖ ಜಿಲ್ಲೆಯಲ್ಲಿ ಪಾರಂಪರಿಕ ಜನಪದ ಕಲೆಗಳನ್ನು ಉಳಿಸಿ ಬೆಳೆಸಲು ವಿಶೇಷ ಆದ್ಯತೆ ಹಾಗೂ ಸಹಾಯ ಒದಗಿಸಬೇಕು.

❖ ಎಲ್ಲ ಕಲಾವಿದರಿಗೂ ಕಡ್ಡಾಯ ಮಾಸಾಶನ ನೀಡುವ ಮೂಲಕ ಪಾರಂಪರಿಕ ಕಲೆಗಳನ್ನು ಉಳಿಸುವ ವ್ಯವಸ್ಥೆಯಾಗಬೇಕು.

❖ ಜಿಲ್ಲೆಯಲ್ಲಿ ಇರುವ ಸಾಹಿತಿ ಬರಹಗಾರರ ಕೃತಿಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಕಟಿಸುವ ವ್ಯವಸ್ಥೆಯಾಗಬೇಕು.

❖ ಕನ್ನಡದ ಯುವ ಸಾಹಿತಿ ಬರಹಗಾರರಿಗೆ ತರಬೇತಿ (ಕಮ್ಮಟ)ಗಳನ್ನು ವರ್ಷಕ್ಕೆ ಎರಡರಂತೆಯಾದರೂ ನಿರಂತರ ಆಯೋಜಿಸಬೇಕು.

❖ ಜಿಲ್ಲೆಯಾದ್ಯಂತ ಕಾಣಸಿಗುವ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯಾಗಬೇಕು. ಇಲ್ಲಿನ ಸ್ಮಾರಕಗಳ ಪರಿಚಯ ನಾಡಿನಾದ್ಯಂತ ಪಸರಿಸುವ ಕಾರ್ಯವಾಗಬೇಕು.

❖ ಪ್ರವಾಸೋದ್ಯಮ ಅಭಿವೃದ್ಧಿಗೆ ವಾರ್ಷಿಕ ಅಥವಾ ಪಂಚವಾರ್ಷಿಕ ಯೋಜನೆ ರೂಪಿಸಬೇಕು.

❖ ಬೀದರ ಜಿಲ್ಲೆಯು ಪ್ರಾಚೀನ ಐತಿಹಾಸಿಕ ಪರಂಪರೆ ಹೊಂದಿದ್ದು, ೧೪ನೆಯ ಶತಮಾನದಲ್ಲಿ ಏಷಿಯಾ ಖಂಡದ ಮೊದಲ ವಿಶ್ವವಿದ್ಯಾಲಯ ಹೊಂದಿದ ಕೀರ್ತಿ ಬೀದರಿಗಿದೆ. ೧೨ನೆಯ ಶತಮಾನದಲ್ಲಿ ಸಮಾಜೋಧಾರ್ಮಿಕ ಕ್ರಾಂತಿ ಮಾಡಿದ ವಚನಕಾರರ ಸ್ಮಾರಕಗಳು ಜಿಲ್ಲೆಯಾದ್ಯಾಂತ ಕಾಣಸಿಗುತ್ತವೆ. ಆದ್ದರಿಂದ ಬೀದರನ್ನು ಅಂತರ್‌ರಾಷ್ಟ್ರೀಯ ಪ್ರವಾಸಿ ಕೇಂದ್ರವೆಂದು ಘೋಷಿಸಬೇಕು.

❖ ಜನರಲ್ಲಿ ಸದ್ಭಾವನೆ ಸಾಮರಸ್ಯ ಉಂಟಾಗುವ ವಿಶೇಷ ಕಾರ್ಯಕ್ರಮಗಳನ್ನು ರೂಪಿಸುವುದು.

ಇತರೆ:

❖ ಜಿಲ್ಲಾ-ತಾಲೂಕು ಕೇಂದ್ರಗಳಲ್ಲಿರುವ ಶ್ರೀಮಂತ ಸಂಸ್ಥೆಗಳು, ಉದ್ದಿಮೆ ಕೇಂದ್ರಗಳು ತಮ್ಮ ಭಾಗದಲ್ಲಿರುವ ಅತೀ ಹಿಂದುಳಿದ ಒಂದೊಂದು ಊರುಗಳನ್ನು ದತ್ತಕ ಪಡೆದು ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಬೇಕು ಇದಕ್ಕೆ ಸರಕಾರವೂ ನೆರವಾಗಬೇಕು.

ಆತ್ಮೀಯರೆ, ಹೀಗೆ ನಮ್ಮ ಮುಂದೆ ಹಲವಾರು ಸಮಸ್ಯೆ ಸವಾಲುಗಳಿವೆ. ಅದಾಗ್ಯೂ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಹೊತ್ತೊಯ್ಯಲು ಸಾಧ್ಯವಿದೆ. ಆದರೆ ಅದು ನಮ್ಮ ಮಧ್ಯೆ ಬಳಕೆಗೆ ಬರಬೇಕು. ವೃತ್ತಿ-ಪ್ರವೃತ್ತಿಯ ಭಾಷೆ ಒಂದೇ ಆಗಬೇಕು. ವಚನಕಾರರು ಆ ಕೆಲಸವನ್ನು ಗಟ್ಟಿಯಾಗಿ ಮಾಡಿದರು. ಎಲ್ಲಾ ವೃತ್ತಿಯ ಕಸುಬುಗಳ ಶಬ್ದಗಳು ತಾತ್ವಿಕ ಚರ್ಚೆಗೆ, ಚಿಂತನೆಗೆ ಬಳಸಿಕೊಂಡು ಹೀಗೆ ಕನ್ನಡವನ್ನು ಸಮೃದ್ಧಿಗೊಳಿಸಿದರು. ಅದರ ಪ್ರಭಾವ ಎಷ್ಟಾಗಿದೆ ಎಂದರೆ ನಂತರ ಬಂದ ಎಲ್ಲಾ ಸಾಹಿತ್ಯ ಪ್ರಕಾರಗಳೂ, ಬಹುತೇಕ ಕವಿಗಳು, ವಚನಕಾರರ ಪ್ರಭಾವದಿಂದ ಹೊರಬರಲಿಲ್ಲ.

ನಮಗೆ ಧರ್ಮ-ಪೂಜೆ, ಜೀವನ ಅನುಭಾವಕ್ಕೆ ಭಿನ್ನ-ಭಿನ್ನ ಭಾಷೆಯಾಗಿದ್ದ ಕಾಲದಲ್ಲಿ ಶರಣರು ಈ ನೆಲದಲ್ಲಿ ಕನ್ನಡ ದೇಶಿ ಭಾಷೆಗೆ ಮಾನ್ಯತೆ ನೀಡಿದ್ದರು. ಆದರೆ ಇಂದು ವಿಜ್ಞಾನದ ಅಧ್ಯಾಪಕ ಕಲಿಸುವುದ್ಕಕೆ ಒಂದು ಭಾಷೆ ಬಳಸಿದರೆ, ಬದುಕುವುದಕ್ಕೆ-ವ್ಯವಹಾರಕ್ಕೆ ಇನ್ನೊಂದು ಭಾಷೆ ಇರುವುದು ಕನ್ನಡದ ಹಿಂಬಿಳುವಿಕೆಗೆ ಕಾರಣ. ಕೃಷಿಕರು, ಕುಶಲಕರ್ಮಿಕರು, ಬಳಸುವ ಕನ್ನಡಕ್ಕೆ ಉತ್ಪಾದಿಸುವ ವಸ್ತುವಿಗೆ ಮಾರುಕಟ್ಟೆ ರೂಪಿಸಬೇಕು. ಕನ್ನಡಿಗರ ಆರ್ಥಿಕ ಸುಧಾರಣೆಯಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಸಕಾರಾತ್ಮಕ ಬೆಳವಣಿಗೆಗಳಾದರೆ ಇಂತಹ ಸಮ್ಮೇಳನಗಳಿಗೆ ಅರ್ಥ ಬರುತ್ತದೆ. ಅಂತಹ ಪ್ರಯತ್ನ ನಮ್ಮೆಲ್ಲರದಾಗಲಿ ಎಂದು ಆಶೀಸುವೆ. ಎಲ್ಲರಿಗೂ ನಮಸ್ಕಾರಗಳು.

ಅನುಭವಾಮೃತ

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ।
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ? ಸಂಸ್ಕೃತದಲಿನ್ನೇನು; ॥

–ಮಹಲಿಂಗ ರಂಗ

ಸಿರಿಗನ್ನಡಂ ಬಾಳ್ಗೆ

ಸ್ವರವಚನ

"ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ ।
ತಲೆವೊಲೆವುತ ಬಂದು ಕುಣಿವ ಕನ್ನಡವ ॥ಪ॥
ಒಂದೆ ಕಾಲವಳು, ಕೆದರಿದ ಮಂಡೆಯವಳು ।
ಒಂದೆ ಮೊಲೆಗೆ ಒಕ್ಕಳದ ಹಾಲ ಕರೆವವಳು ॥
ಅಂದೆ ಹುಟ್ಟಿತೊಂದು ರತ್ನವರ್ಣದ ಬಳ್ಳಿ ! ಎತ್ತೇ-
ನೆಂದಡೆ ಏಳದ ! ಕಿತ್ತೇನೆಂದಡೆ ಕೀಳದು ॥
ನಿಜಲಿಂಗನಲೀಲೆಯೊಳು ಕುಣಿವ ಕನ್ನಡವ"

–ನಿಜಗುಣಯೋಗಿ